## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಅಬಕಾರಿ ಇಲಾಖೆಯಲ್ಲಿ ಹೊಸದಾಗಿ ಹುದ್ದೆಗಳನ್ನು ಸೃಜಿಸುವ ಕುರಿತು.
ಓದಲಾಗಿದೆ:- ಅಬಕಾರಿ ಆಯುಕ್ತರ ಪತ್ರ ಸಂ.ಇಸಿಇ/01/ಟಿಎಂಪಿ/2014-15 ದಿನಾಂಕ:07-07-2014.

ಪ್ರಸ್ತಾವನೆ:-

ಅಬಕಾರಿ ಇಲಾಖೆಯಲ್ಲಿ ಕೆಲವು ಕಛೇರಿಗಳಲ್ಲಿ ಹುದ್ದೆಗಳು ಸಮಾನಾಂತರವಾಗಿ ಹಂಚಿಕೆಯಾಗಿರುವುದಿಲ್ಲ, ಅದರಲ್ಲೂ ಕೆಲವು ಕಛೇರಿಗಳಿಗೆ ಹೊಸದಾಗಿ ಹುದ್ದೆಗಳನ್ನು ಸೃಜಿಸುವ ಅವಶ್ಯಕತೆ ಇರುತ್ತದೆಂದು, ಈ ಕೆಳಕಂಡ ವೃಂದಗಳ ಒಟ್ಟು 57 ಹುದ್ದೆಗಳನ್ನು ಸೃಜಿಸಲು ಕೋರಿ ಮೇಲೆ ಓದಲಾದ ಪತ್ರದಲ್ಲಿ ಅಬಕಾರಿ ಆಯುಕ್ತರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

| ಕ್ರ.ಸಂ | ಪದನಾಮ | ಹುದ್ದೆಗಳ ಸಂಖ್ಯೆ |
|---|---|---|
| 1. | ಕಛೇರಿ ಅಧೀಕ್ಷಕರು | 14 |
| 2. | ಪ್ರಥಮ ದರ್ಜೆ ಸಹಾಯಕರು | 12 |
| 3. | ಶೀಘ್ರಲಿಪಿಗಾರರು | 01 |
| 4. | ದ್ವಿತೀಯ ದರ್ಜೆ ಸಹಾಯಕರು | 06 |
| 5. | ಬೆರಳಚ್ಚುಗಾರರು | 06 |
| 6. | ವಾಹನ ಚಾಲಕರು | 01 |
| 7. | ಗ್ರೂಪ್ ಡಿ ನೌಕರರು | 17 |
| ಒಟ್ಟು | | 57 |

ಈ ಮೇಲಿನ ಹುದ್ದೆಗಳನ್ನು ಸೃಜಿಸುವುದರಿಂದ ವಾರ್ಷಿಕ ರೂ.1,39,89,048/-ಗಳಷ್ಟು ಆವರ್ತಕ ವೆಚ್ಚ ಉಂಟಾಗುತ್ತದೆಂದು ಅಬಕಾರಿ ಆಯುಕ್ತರು ತಿಳಿಸಿರುತ್ತಾರೆ. ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಮುಂದಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂ.ಎಫ್‌ಡಿ 107 ಇಪಿಎಸ್ 2014, ಬೆಂಗಳೂರು, ದಿನಾಂಕ:27-10-2014.**

ಸರ್ಕಾರವು, ಪ್ರಸ್ತಾವನೆಯಲ್ಲಿ ನಮೂದಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಅಬಕಾರಿ ಇಲಾಖೆಯ ವಿವಿಧ ಕಛೇರಿಗಳಿಗೆ ಅಗತ್ಯವಿರುವ ಈ ಕೆಳಕಂಡ ಒಟ್ಟು 57 ಹುದ್ದೆಗಳನ್ನು ಸೃಜಿಸಲು ಮಂಜೂರಾತಿ ನೀಡಿದೆ.

| ಕ್ರ.ಸಂ | ಪದನಾಮ | ಹುದ್ದೆಗಳ ಸಂಖ್ಯೆ |
|---|---|---|
| 1. | ಕಛೇರಿ ಅಧೀಕ್ಷಕರು | 14 |
| 2. | ಪ್ರಥಮ ದರ್ಜೆ ಸಹಾಯಕರು | 12 |
| 3. | ಶೀಘ್ರಲಿಪಿಗಾರರು | 01 |
| 4. | ದ್ವಿತೀಯ ದರ್ಜೆ ಸಹಾಯಕರು | 06 |
| 5. | ಬೆರಳಚ್ಚುಗಾರರು | 06 |
| 6. | ವಾಹನ ಚಾಲಕರು | 01 |
| 7. | ಗ್ರೂಪ್ ಡಿ ನೌಕರರು (outsource) | 17 |
| ಒಟ್ಟು | | 57 |

......2

ಈ ಆದೇಶವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಅನಧಿಕೃತ ಟಿಪ್ಪಣಿ ಸಂ.ಸಿಆಸುಇ 404 ಸಿಶಾಸೇ 2014 ದಿನಾಂಕ 19-09-2014ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
27/10/14
(ವೆಂಕಟೇಶ್.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಅಬಕಾರಿ).

ಇವರಿಗೆ,

1. ಅಬಕಾರಿ ಆಯುಕ್ತರು, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು(ಎ ಮತ್ತು ಇ/ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು.
3. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ಸಿಬ್ಬಂದಿ)
4. ಶಾಖಾ ರಕ್ಷಿತ ಕಡತ/ಹೆಚ್ಚುವರಿ ಪ್ರತಿ

EST-H 31/10/2014